


ಬೌದ್ಧಿಕ ನ್ಯೂನತೆಯ ಮಕ್ಕಳಲ್ಲೂ ಸ್ವಾಭಿಮಾನದ ಬದುಕಿಗೆ ಶಿಕ್ಷಣವೇ ಆಧಾರ ಆಗಬೇಕು. ಆ ಶಕ್ತಿಯನ್ನು ತುಂಬಲು ಮಕ್ಕಳ ಹಿತಕ್ಕೆ ಒತ್ತಾಸೆಯಾಗಿ ನಾವು ನಿಲ್ಲುವುದು ಅಗತ್ಯ ಎನ್ನುತ್ತಾರೆ ಶಿಕ್ಷಕಿ ಶಿವಲೀಲಾ ಚೂಡಿ. ಮಕ್ಕಳ ಬೆಳವಣಿಗೆಗೆ ವೈಜ್ಞಾನಿಕ ಸಾಧನ ಶಿಕ್ಷಣ. ಅದು ಎಲ್ಲರನ್ನೂ ಒಳಗೊಳ್ಳುವಂತೆ ಮಾಡಬೇಕು. ಅದಕ್ಕೆ ಕಲೆಯ ಸ್ವರೂಪ, ತಾಂತ್ರಿಕ ನೈಪುಣ್ಯ ಮತ್ತು ಹೊಸ ಹೊಸ ಆವಿಷ್ಕಾರವನ್ನು ಅನ್ವಯಿಸಬೇಕು. ಮೌಲ್ಯಯುತ ಬದುಕಿಗೆ ಬೇಕಾಗುವ ಅರಿವನ್ನು ಪಠ್ಯ–ಪ್ರವಚನಗಳ ಮೂಲಕ ನೀಡುತ್ತದೆ. ಒಂದು ಮಗು ನಿರಂತರ ಕಲಿಯುತ್ತಲೇ ತನ್ನವರೊಡನೆ ವ್ಯವಹರಿಸುತ್ತದೆ. ಬೆಳವಣಿಗೆಯಲ್ಲಿ ನ್ಯೂನತೆ ಇದ್ದರೆ ಆ ಮಗು ಸಹಜವಾಗಿ ಕಲಿಯಲು ಸಾಧ್ಯವಿಲ್ಲ. ಅದಕ್ಕೆ ವಿಶೇಷ ಕಾಳಜಿ ಪ್ರೋತ್ಸಾಹ ಅಗತ್ಯವಾಗಿ ಬೇಕಾಗುತ್ತದೆ. ಅದನ್ನು ಪೋಷಕರು 2.5ವರ್ಷ ತುಂಬುವಷ್ಟರಲ್ಲಿ ಗುರುತಿಸಬೇಕು. ಮಗುವಿನ ಲಕ್ಷಣವನ್ನು ನೋಡಿ ಕ್ಲಿನಿಕಲ್ ಸೈಕಾಲಜಿಸ್ಟ್ (ಮಕ್ಕಳ ಮನೋತಜ್ಞರು) ಸೂಕ್ತ ಮಾರ್ಗದರ್ಶನವನ್ನು ನೀಡುತ್ತಾರೆ. ಅವರ ಸೂಚನೆಯನ್ನು ಆಧರಿಸಿ ಮಕ್ಕಳಿಗೆ ಕಲಿಕಾ ಪ್ರಕ್ರಿಯೆಯನ್ನು ಆರಂಭಿಸುವುದು ಸದ್ಯದ ವೈಜ್ಞಾನಿಕ ಪದ್ಧತಿ ಎನ್ನುವುದು ಅವರ ಅನುಭವದ ಮಾತು.



ಕೆಲಮಕ್ಕಳು ಬೌದ್ಧಿಕ ಸಮಸ್ಯೆ, ಆಟಿಸಂ, ಕಲಿಕಾ ನ್ಯೂನತೆ ಮಾತ್ರವಲ್ಲದೆ, ಬೇರೆ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಅನನ್ನು ಸಕಾಲಿಕವಾಗಿ ಗುರುತಿಸುವುದು ಜವಾಬ್ದಾರಿಯ ಕೆಲಸ. ಮಗುವಿಗೆ ಕಿವಿ ಕೇಳದೆ ಇರಬಹುದು.

